ಸಾಕ್ಷಿಯನ್ನು ದಿಃ 06.06.2023 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**<u>ಪಾಟೀ ಸವಾಲುಃ</u> ಶ್ರೀ ವಿ ಸಿ ಎಸ್ ವಕೀಲರಿಂದಃ**

1. ನನ್ನ ತಂದೆಯ ಹೆಸರು ಪರಪ್ಪ. ತಾಯಿಯ ಹೆಸರು ಶಾರಮ್ಮ ಇರುತ್ತದೆ. ನಾವು ಒಟ್ಟು 10 ಜನ ಮಕ್ಕಳು. ಅವರ ಹೆಸರುಗಳು ಯಲ್ಲಪ್ಪ, ಶೇಖಪ್ಪ, ನಾನು-ಗಿರಿಜವ್ವ, ಈರಪ್ಪ, ರೇಣವ್ವ, ಯಲ್ಲವ್ವ, ಹನುಮವ್ವ, ಸಾವಿತ್ರಿ, ಮಲ್ಲಪ್ಪ, ಹನುಮಂತಪ್ಪ ಇರುತ್ತವೆ. ನನ್ನ ತಂದೆ ಹೊಲ ಮನೆ ಕೆಲಸ, ಕುರಿಸಾಕಾಣಿಕೆ ಮಾಡುತ್ತಾರೆ. ನಮ್ಮ ತಂದೆಯ ಕುರಿ ಸಾಕಾಣಿಕೆ ಉದ್ಯೋಗವು ದೊಡ್ಡ ಪ್ರಮಾಣದಲ್ಲಿದೆ ಎಂದರೆ ಸರಿ. ಗಂಡು ಮಕ್ಕಳ ಪೈಕಿ 1 ನೇ ವಾದಿಯು ದದೊಡ್ಡವನು ಎಂದರೆ ಸರ. ಹೆಣ್ಣು ಮಕ್ಕಳ ಪೈಕಿ ನಾನು ದೊಡ್ಡವನು ಎಂದರೆ ಸರಿ. ನನ್ನನ್ನು ಗದಗಿನಲ್ಲಿ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಮದುವೆಯಾಗಿದರು ಸಹ ನಾನು ನನ್ನ ತವರು ಮನೆಯ ದಿನಂಪ್ರತಿ ಎಲ್ಲಾ ಕಾರ್ಯ ಕಲಾಪಗಳಲ್ಲಿ ಭಾಗವಹಿಸುತ್ತೇನೆ. 6-7 ವರ್ಷಗಳ ಹಿಂದೆ ನನ ತಂದೆಗೆ ವಯಸ್ಸಾಗಿದ್ದಗಿಂದ ಹೋಲ ಮನೆ, ಕುರಿ ಸಾಕಾಣಿಕೆಯನ್ನು ಮನೆತನದ ಜವಾಬ್ದಾರಿಯನ್ನು 1 ನೇ ವಾದಿ ನೋಡಿಕೊಳ್ಳುತ್ತಿದ್ದನು ಎಂದರೆ ಸರಿ. ಮನೆಯ ಜವಾಬ್ದಾರಿಯನ್ನು ನಾನು ನೋಡಿಕೊಳ್ಳುತ್ತಿದ್ದೆನು ಎಂದರೆ ಸರಿ. ನಮ್ಮ ಸಹೋದರ ಸಹೋದರಿಯರ ಮದುವೆಯಾದ ನಂತರ ಸಣ್ಣ ಪುಟ್ಟ ಜಗಳ ಪ್ರಾರಂಭವಾಯಿತು ಎಂದರೆ ಸರಿಯಲ್ಲ. ಸೊಸೆಂದಿರ ನಡುವೆ ಹಾಗೂ ನಮ್ಮ ನಡುವೆ ಹೊಂದಾಣಿಕೆಯಾಗಲಿಲ್ಲ ಎಂದರೆ ಸರಿಯಲ್ಲ. ನಮ್ಮ ತಮ್ಮನ ಮದುವೆಯಾದ ನಂತರ ಮನೆಯ ವಾತಾವರಣ ಸರಿ ಇಲ್ಲ ಎಂದು ಹೇಳಿ 1 ನೇ ವಾದಿ ಪ್ರತ್ಯೇಕವಾಗಿ ವಾಸ ಮಾಡುತ್ತೇನೆ ಎಂದು ಹೇಳಿದನು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸರಿ ಇದೆ ಎಂದು ಹೇಳುತ್ತಾರೆ. ಮನೆತನದ ದುಡ್ಡಿದಿಂದ 2015 ರಲ್ಲಿ ನನ್ನ ತಂದೆಯು 1 ನೇವಾದಿಯ ಹೆಸರಿನಲ್ಲಿ 2 ಎಕರೆ 1 ಗುಂಟೆ ಜಮೀನನ್ನು ಖರೀದಿಸಿರು ಎಂದರೆ ಸರಿಯಲ್ಲ. 1 ನೇ ವಾದಿಯದು ಮನೆತನದ ಕುರಿ ಸಾಕಾಣಿಕೆ ಹಾಗೂ ಹೊಲ ಮನೆ ಉದ್ಯೋಗ ಬಿಟ್ಟು ಬೇರೆ ಯಾವುದೇ ಉದ್ಯೋಗ ಇರಲಿಲ್ಲ ಎಂದರೆ ಸರಿ. ನನ್ನ ತಂದೆಯು 2015 ರಲ್ಲಿ ಅವಿಭಕ್ತ ಆಸ್ತಿಯಿಂದ 1 ನೇ ವಾದಿಯ ಹೆಸರಿನಲ್ಲಿ 2 ಎಕರೆ 1

ಗುಂಟೆ ಜಮೀನನ್ನು ಖರೀದಿ ಹಿಡಿದಿರುತ್ತಾರೆ ಎಂದರೆ ಸರಿಯಲ್ಲ. ಹಮಾಲರ ಕಾಲೋನಿಯಲ್ಲಿ 4 ಲಕ್ಷ ದುಡ್ಡು ಕೊಟ್ಟು ನನ್ನ ತಂದೆಯು 1 ನೇ ವಾದಿಯ ಹೆಸರಿನಲ್ಲಿ ಪ್ಲಾಟು ಹಿಡಿದು ಮನೆ ಕಟ್ಟಿಸಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 1 ನೇ ವಾದಿಯ ಉಪಜೀವನ ಸಾಗಿಸಲು 30 ಕುರಿಗಳನ್ನು ನನ್ನ ತಂದೆಯು ಕೊಟ್ಟಿದ್ದರು ಎಂದರೆ ಸರಿಯಲ್ಲ. 1 ನೇ ವಾದಿಯ ಹೆಸರಿನಲ್ಲಿರುವ ಹೊಲ ಹಾಗೂ ಮನೆಗಳು ಅವಿಭಕ್ತ ಕುಟುಂಬದಿಂದ ಬಂದ ಆದಾಯದಿಂದ ಖರೀದಿ ಹಿಡಿದ ಆಸ್ತಿಗಳು ಎಂದರೆ ಸರಿಯಲ್ಲ.

2. ನನ್ನ ತಂದೆ ಹಾಗೂ ನಿಂಗಪ್ಪ ಗೂಳ್ಯಣ್ಣನವರ ಸೇರಿ ಗದಗಿನಲ್ಲಿ ಸರ್ವೇ ನಂ. 596 ರಲ್ಲಿಯ ಪ್ಲಾಟು ನಂ. 57 ರಲ್ಲಿ ಸೇರಿಕೊಂಡು ಒಂದು ಪ್ಲಾಟನ್ನು ಖರೀದಿಸಿದ್ದರು ಎಂದರೆ ಸರಿ. ನನಗೂ ಸಹ ಆಸ್ತಿಗಳಲ್ಲಿ ಪಾಲು ಬೇಕು ಎಂದು ಹೇಳಿದಾಗ ನನ್ನ ತಂದೆಯು ನಿಂಗಪ್ಪರವರಿಗೆ ಸೇರಿದ ಅರ್ಧ ಪ್ಲಾಟನ್ನು ನನ್ನ ಹೆಸರಿನಲ್ಲಿ ಖರೀದಿಸಿ ಕೊಟ್ಟರು ಎಂದರೆ ಸರಿಯಲ್ಲ. ನನ್ನ ತಂದೆಯಲ್ಲಿರುವ ಅರ್ಧ ಪ್ಲಾಟನ್ನು ನನ್ನ ಹೆಸರಿನಲ್ಲಿ ಹಕ್ಕು ಬಿಟ್ಟಕೊಟ್ಟ ಪತ್ರ ಮಾಡಿಸಿಕೊಂಡೆನು ಎಂದರೆ ಸರಿಯಲ್ಲ. ಪ್ಲಾಟ ನಂ. 57 ರಲ್ಲಿ ಮನೆ ಕಟ್ಟಲು ನನ್ನ ತಂದೆಯು ನನಗೆ 13 ಲಕ್ಷ ಗಳನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ತವರುಮನೆಯಿಂದ ಬಂದ ಆಸ್ತಿ ನನಗೆ ಬಂದಿದೆ ಎಂದು ಹೇಳಿ ನನ್ನ ತಂದೆಗೆ ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆಯು ಅವಿಭಕ್ತ ಕುಟುಂಬದಿಂದ ಬಂದ ಆದಾಯವನ್ನು ಉಪಯೋಗಿಸಿಕೊಂಡನು ನನಗೆ ಪ್ಲಾಟನ್ನು ಖರೀದಿಸಿಕೊಟ್ಟಿರುತ್ತಾರೆ ಹಾಗೂ ಹಣವನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ಹಾಗೂ 1 ನೇ ವಾದಿಯು ನಮಗೆ ಬರಬೇಕಾದ ಹಿಸ್ಸೆ ಬಂದಿರುತ್ತದೆ ಆದಕಾರಣ, ಇನ್ನು ಮುಂದೆ ಹಿಸ್ಸೆಯನ್ನು ಕೇಳುವುದಿಲ್ಲ ಎಂದು 1 ನೇ ಪ್ರತಿವಾದಿಗೆ ಮಾತು ಕೊಟ್ಟಿದ್ದೆವು ಎಂದರೆ ಸರಿಯಲ್ಲ. ದಿಃ 16.07.2021 ರಂದು ನನ್ನ ಸಹೋದರ ಸಹೋರಿಯರು ಸೇರಿ ದಾವಾ ಆಸ್ತಿಗಳಲ್ಲಿ ನಮಗೆ ಪಾಲು ಬಂದಿದ್ದರಿಂದ ತಮ್ಮ ತಮ್ಮ ನಡುವೆ ನೊಂದಾಯಿತ ವಾಟ್ನಿ ಪತ್ರ ಮಾಡಿಕೊಂಡಿತ್ತಾರೆ ಎಂದರೆ ಸರಿಯಲ್ಲ. ನನ ತಂದೆ, ಸಹೋದರ ಸಹೋದರಿಯರಿಗೆ ತೊಂದರೆ ಕೊಡಬೇಕು ಎಂದು ದುರುದ್ದೇಶದಿಂದ ನಾನು ಹಾಗೂ 1 ನೇ ವಾದಿ ಸುಳ್ಳು ವ್ಯಾಜ್ಯವನ್ನು ಸಲ್ಲಿಸಿ, ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ವಾದಿಯ ಹೆಸರಿನಲ್ಲಿರುವ ಹೊಲ ಹಾಗೂ ಮನೆ ನನ್ನ ಹೆಸರಿನಲ್ಲಿರುವ ಖರೀದಿಸಿದ ಪ್ಲಾಟು ಹಾಗೂ ಮನೆಗೆ ಸಂಬಂಧಪಟ್ಟಂತೆ ಅವಿಭಕ್ತ ಕುಟುಂಬದಿಂದ ಬಂದ ಆದಾಯದಿಂದ ಖರ್ಚು ಮಾಡಿರುವುದರಿಂದ ಪ್ರತಿವಾದಿಯರಿಗೂ ಸಹ ನಮ್ಮ ಆಸ್ತಿಗಳಲ್ಲಿ ಹಿಸ್ಸೆ ಇರುತ್ತದೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ.

ಸಹಿ: 06.06.2023
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.